**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :25 ಸಿಡಬ್ಲು :2

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ಲಕ್ಷ್ಮಣ ಕರಿಭೀಮಗೋಳ |
| ತಂದೆಯ ಹೆಸರು | : | ಶ್ರೀ.ಗಿರಿಮಲ್ಲ ಕರಿಭೀಮಗೋಳ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಕಾರ್ಯದರ್ಶಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಮುಗಳಖೋಡ |
| ವಾಸ್ತವ್ಯ | : | ಮುಗಳಖೋಡ |
| ದಿನಾಂಕ | : | 18-10-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1, ಚಾಸಾಃ 3 ಮತ್ತು ಚಾಸಾಃ 8 ನನಗೆ ಗೊತ್ತಿರುತ್ತಾರೆ. ನಾನು ಆರೋಪಿತರನ್ನು ಊರಿನಲ್ಲಿ ನೋಡಿದ್ದೇನೆ.

2. ಹಾರೂಗೇರಿ ಪೋಲಿಸರು 2017 ಅಗಸ್ಟ್ 27 ರಂದು ನನ್ನನ್ನು ಘಟನೆ ಆದ ಸ್ಥಳವಾದ ಮಾದರ ಓಣಿ ಹತ್ತಿರ ದುರ್ಗಾ ದೇವಿ ಗುಡಿಗೆ ಹೋಗುವ ರಸ್ತೆಯಲ್ಲಿ ಯಲ್ಲಮ್ಮ ದೇವಿ ಪಾದುಕಟ್ಟೆಯ ಹತ್ತಿರ ಕರೆಸಿದ್ದರು. ನಾನು ಸ್ಥಳಕ್ಕೆ ಹೋದಾಗ ಡಿ.ವೈ.ಎಸ್.ಪಿ ಅವರು ಇದ್ದು ಅವರಿಗೆ ಚಾಸಾಃ 8 ಲಕ್ಷ್ಮಣ ಕೆಳಗಡೆ ಅವರು ಮಾಹಿತಿ ನೀಡಿದರು. ಸ್ಥಳದಲ್ಲಿ ಡಿ.ವೈ.ಎಸ್.ಪಿ ಅವರು ಬಿದಿರಿನ ಬಂಬು, ಸಲಾಕೆ ಮತ್ತು ಕಲ್ಲುಗಳನ್ನು ತೆಗೆದುಕೊಂಡು ಸೀಲ ಮಾಡಿ ಪ್ಯಾಕ ಮಾಡಿದರು. ನಾನು ಮತ್ತು ಚಾಸಾಃ 3 ಮಹಾಂತೇಶ ಬಳಿಗಾರ ಸಹಿ

ಮಾಡಿದೇವು, ಮತ್ತು ಡಿ.ವೈ.ಎಸ್‌ಪಿ ಅವರು ಸಹಿ ಮಾಡಿದರು. ಸ್ಥಳದಲ್ಲಿ ಪೋಲಿಸರು ಪೋಟೋ ತೆಗೆದರು. ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಸಹಿ ಗುರುತಿಸಿದ್ದು, ಪಂಚನಾಮೆಯನ್ನು ಈಗಾಗಲೇ ನಿಪಿ–14 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ–14 [ಸಿ] ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆಯಲಾದ ಎರಡು ಪೋಟೋಗಳಲ್ಲಿ ತಮ್ಮ ಇರುವಿಕೆಯನ್ನು, ಚಾಸಾಃ 3, ಚಾಸಾಃ 8 ಹಾಗೂ ಡಿ.ವೈ.ಎಸ್.ಪಿ ಅವರ ಇರುವಿಕೆಯನ್ನು ಗುರುತಿಸಿದ್ದಾರೆ. ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ಇಲ್ಲದೇ ಇರುವುದರಿಂದ ಪೋಟೋವನ್ನು ಸಾಕ್ಷಿಯಾಗಿ ಗುರುತಿಸಿರುವುದಿಲ್ಲ.

**ಪಾಟೀ ಸವಾಲುಃ1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜಿ. ವಕೀಲರಿಂದ**

ನಾನು ಡಿ.ಎಡ್ ಪದವಿ ಪಡೆದಿದ್ದೇನೆ. ಪಂಚನಾಮೆಗೆ ಬರುವಂತೆ ಪೋಲಿಸರು ನನಗೆ ನೋಟಿಸ ನೀಡಿರಲಿಲ್ಲ. ಈ ಘಟನೆ ಸಮಯದಲ್ಲಿ ನಾನು ಮುಗಳಖೋಡ ಗ್ರಾಮದ ವಿವಿದ್ದೋದ್ದೇಶ ಸಹಕಾರ ಸಂಘದಲ್ಲಿ ಕೆಲಸ ಮಾಡುತ್ತಿದ್ದೇನು. ಸ್ಥಳದಲ್ಲಿ ಕಲ್ಲಿನ ರಾಶಿ, ಕಲ್ಲುಗಳು, ಕಬ್ಬಿಣದ ಸಲಾಕೆಗಳು, ಬಿದಿರಿನ ಬಂಬುಗಳು ಕಟ್ಟಿದ ಕಬ್ಬಿಣದ ಸಲಾಕೆಗಳು ಬಿದ್ದಿದ್ದವು ಎನ್ನುವುದು ಸರಿ. ಪೋಲಿಸರು ನನ್ನ ಸಮಕ್ಷಮ ಜಪ್ತು ಮಾಡಿದ ವಸ್ತುಗಳ ಮೇಲೆ ಗುರುತು ಮಾಡಿದ ಬಗ್ಗೆ ಈಗ ನನಗೆ ನೆನಪಿರುವುದಿಲ್ಲ.

2. ಕಬ್ಬಿಣದ ಸರಳು, ಬಿದಿರಿನ ಬಂಬುವಿನ ಅಳತೆಯನ್ನು ಮಾಡಿದ್ದಾರೆ. ಅದನ್ನು ಪಂಚನಾಮೆಯಲ್ಲಿ ಬರೆದಿದ್ದಾರೆ. ಪಂಚನಾಮೆಯಲ್ಲಿ ಚೆಕಬಂದಿಯನ್ನು ಪೋಲಿಸರು ಬರೆದಿದ್ದಾರೆ. ಅದನ್ನು ಚಾಸಾಃ 8 ಲಕ್ಷ್ಮಣ ಕೆಳಗಡೆ ಅವರು ಪೋಲಿಸರಿಗೆ ಹೇಳಿದರು. ನನಗೂ ಸಹ ಚೆಕಬಂದಿ ಗೊತ್ತಿರುತ್ತದೆ. ಘಟನಾ ಸ್ಥಳದಿಂದ ಅರ್ಧ ಕಿಲೋಮೀಟರ ದೂರದಲ್ಲಿ ನಮ್ಮ ಮನೆ ಇದೆ. ದುರ್ಗಾದೇವಿ ಗುಡಿ ರಸ್ತೆಯಲ್ಲಿ ನಾನು ಯಾವಾಗಲೂ ಓಡಾಡುತ್ತೇನೆ ಎನ್ನುವುದು ಸರಿ.

3. 2017–18 ರಲ್ಲಿ ಕೋ–ಆಪ್‌ರೇಟಿವ ಬ್ಯಾಂಕನಲ್ಲಿ ನಾನು ಕೆಲಸ ಮಾಡುತ್ತಿರಲಿಲ್ಲ. ನಾನು ಸ್ವಸಹಾಯ ಗುಂಪಿನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಪೋಲಿಸರು ಮುಂದೆ ನೀಡಿದ ಹೇಳಿಕೆಯಲ್ಲಿ ಸ್ವಸಹಾಯ ಗುಂಪಿನಲ್ಲಿ ಕೆಲಸ ಮಾಡುತ್ತಿದ್ದೆ ಎನ್ನುವ ಹೇಳುವ ಬದಲು ಕೋ–ಆಪ್‌ರೇಟಿವ ಬ್ಯಾಂಕನಲ್ಲಿ ನಾನು ಕೆಲಸ ಮಾಡುತ್ತಿದ್ದೆ ಎಂದು ಹೇಳಿದ್ದೇನೆ. ಪಂಚನಾಮೆ ಮಾಡುವ ಸಮಯದಲ್ಲಿ ಡಿ.ವೈ.ಎಸ್.ಪಿ ಅವರು ನನ್ನನ್ನು ಕರೆಸಿದ್ದರು. ಲಕ್ಷ್ಮಣ ಕೆಳಗಡೆ ಅವರು ನಮ್ಮ ಊರಿನವರಾಗಿರುವುದರಿಂದ ನನಗೆ ಮೊದಲಿನಿಂದಲೂ ಪರಿಚಯ ಇರುತ್ತಾರೆ.

4. ಮು.ಮಾ.1, ಮು.ಮಾ.2 ಮತ್ತು ಮು.ಮಾ.3 ನ್ನು ಸ್ಥಳದಲ್ಲಿ ಜಪ್ತು ಮಾಡಿ ಗುರುತು ಮಾಡಿದ ಬಗ್ಗೆ ನನಗೆ ನೆನಪಿರುವುದಿಲ್ಲ. ಮು.ಮಾ.1, ಮು.ಮಾ.2 ಮತ್ತು ಮು.ಮಾ.3 ನ್ನು ನನ್ನ ಸಮಕ್ಷಮ ಜಪ್ತು ಮಾಡಿಲ್ಲ ಎನ್ನುವುದು ಸರಿಯಲ್ಲ. ಪೋಲಿಸರು ನಿಪಿ–14 ಪಂಚನಾಮೆಗೆ ಪೋಲಿಸ ಠಾಣೆಯಲ್ಲಿ ನನ್ನ ಸಹಿ ಮಾಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ನಾನು ಸ್ಥಳದಲ್ಲಿಯೇ ಮಾಡಿದ್ದೇನೆ ಎಂದು ಹೇಳಿದ್ದಾರೆ.

5. ಚಾಸಾಃ 1 ಬಸಪ್ಪ ಅವರು ಇಂದು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎನ್ನುವುದು ಸರಿಯಲ್ಲ. ಚಾಸಾಃ 1 ಬಸಪ್ಪ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 34 ನೇ ಆರೋಪಿತರ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.